


ಎಡದಿಂದ ಬಲಕ್ಕೆ:

1. ಆಗ್ರಹಿಸಿ ಅವನು ಪಡೆದದ್ದು ಇದೆಂಥ ಕೃಪೆ? 4
3. ವೈರತ್ವವನ್ನೇ ಅರಸುವವರಿಗೆ ಸದಾ ಎಲ್ಲರೊಡನೆಯೂ ವೈಮನಸ್ಯ 3
4. ಪುಟ್ಟ ಪುಟ್ಟ ಬಟ್ಟಲು ಕಳುಹಲು ಅಂಚೆಯೇ ಸರಿ 3
6. ಕೊಳ್ಳುವವರು ಬಹಳ ಇಲ್ಲವಲ್ಲ ಎಂಬುದೇ ಈಗಿನ ಚಿಂತೆ 4
7. ಬಲ್ಲವರುಂಟೇ ಲಂಕಾಪುರಿಯ ಶತ್ರುವಿನ ಶಕ್ತಿ? 4
9. ಗುರುತು ಹಿಡಿದಿರಾ ? ಆತ ಹಸು ಕಾಯುವವ 4
12. ಶತಕಕ್ಕೆ ಅಂಟಿಕೊಂಡ ನೂರು ಲಕ್ಷವೆಂದರೆ ಎಷ್ಟು? 4
14. ಕರ್ತಾರನ ಸೃಷ್ಟಿಯೇ ತಾನೇ ಈ ನಾಟ್ಯಗಾರ ಕೂಡ 3
15. ಗಡಿಯಾರವನ್ನು ಹೊತ್ತೊಯ್ದ ಮಂಗ ಮುಂದಾಳು ಹಿಂದುಮುಂದು 3
16. ರಂಪವನ್ನೆಲ್ಲ ಮಾತಿನಲ್ಲೇ ಸರಿಪಡಿಸಿದ ನೋಡಿ, ಲಕ್ಷ್ಮಿಯ ಗಂಡ 4

ಮೇಲಿಂದ ಕೆಳಕ್ಕೆ:

1. ಈ ದಾಸವಾಳದ ಸೌಂದರ್ಯ ವರ್ಣಿಸಲು ಅಸಾಧ್ಯ 4
2. ಹರಟೆ ಮಾತುಗಳಲ್ಲೂ ಹಿಡಿದ ಪಟ್ಟು ಬಿಡದ ಗ್ರಾಮ ದೇವತೆ 4
3. ಒಳ್ಳೆಯವರೆಂದು ಹೇಳಬಹುದಾದವರು ಈಗೀಗ ಅಪರೂಪ 3
5. ಬಂಧಿಯಾಗಲು ಬಂದವನಲ್ಲಿ ಬುಡಮೇಲಾದ ಬದಲಾವಣೆ 3
6. ಮನಸ್ಸನ್ನಂತೂ ಕುಟುಕುವಂತಿದೆ ಅವರ ಚುಚ್ಚುನುಡಿ 4
8. ಸ್ಥಾನಪಲ್ಲಟವಾದದ್ದಕ್ಕೆ ಲಾಠಿ ಹಿಡಿದು ಹೊಡೆದಾಟ 4
10. ಜನರನ್ನೆಲ್ಲ ಹೆದರಿಸುತ್ತಿದೆ ರೋಗದ ಜೊತೆಗಾರ 3
11. ಶ್ರೇಷ್ಠ ಹರಿಕಥೆ ಕೇಳುವುದು ಸಂತಸಪ್ರದ 4
12. ವೀರಾವೇಶದಿಂದ ಹರಿಯುತ್ತಿದೆ ಜೋಗದ ನದಿ 4
13. ಕಾಡಿನಿಂದ ಹೊರಕ್ಕೆ ಹೇಗೆ ಬಂತು ಈ ಭಾರೀ ಮಂಗ? 3

---

## 10—9—2020 ಉತ್ತರಗಳು

ಎಡದಿಂದ ಬಲಕ್ಕೆ:

1. ಅಭಿಮಾನ 3. ವಿರೋಧ 4. ನಡುಕ 6. ಸಂಭಾವನೆ 8. ಕಾಲುಭಾಗ 10. ಸುಪ್ರಭಾತ 12. ರಕ್ತವರ್ಣ 16. ಕಲಾಪ 17. ನಧಾವಿ (=ವಿಧಾನ ಹಿಂದುಮುಂದು) 18. ಸಿರಿತನ

ಮೇಲಿಂದ ಕೆಳಕ್ಕೆ:

1. ಅಧಮ 2. ನನಸು 3. ವಿಪ್ಲವ 5. ಕಡಲು 6. ಸಂದೇಹಿಸು 7. ನೆರೆಯಾತ 8. ಕಾರ್ಯಭಾರ 9. ಗಜಕರ್ಣ 11. ಭಾವುಕ 13. ಕ್ತರವಿ (=ವಿರಕ್ತ ತಲೆಕೆಳಗು) 14. ತಾಪಸಿ 15. ಕಾನನ

ಪ್ರಶ್ನಾಂಕಣ

# ಪಕ್ಷಿ ವಲಸೆ: ಏನೇನು ದಾಖಲೆ?

ಪಕ್ಷಿ ವಲಸೆ ಅದು ನಿಸರ್ಗದ ಪರಮ ವಿಸ್ಮಯದ ಒಂದು ವಿದ್ಯಮಾನ. ಧಾರಾಳ ಆಹಾರ, ಹಿತಕರ ಹವೆ ಮತ್ತು ಸಂತಾನದ ಅಭಿವೃದ್ಧಿಗಾಗಿ ಚಳಿ ಪ್ರದೇಶದ ಹಕ್ಕಿಗಳು ಚಳಿಗಾಲದಲ್ಲಿ ತಮ್ಮ ಮೂಲ ನೆಲೆಗಳನ್ನು ಬಿಟ್ಟು ದೂರ ದೂರದ ನಿರ್ದಿಷ್ಟ ಬೆಚ್ಚನೆಯ ಪ್ರದೇಶಗಳಿಗೆ ಪ್ರತಿ ವರ್ಷ ವಲಸೆ ಹೋಗಿ ಹಿಂದಿರುಗುತ್ತವೆ. ಅತ್ಯಂತ ಶ್ರಮದಾಯಕವಾದ ಮತ್ತು ತುಂಬ ಅಪಾಯಕಾರಿಯೂ ಆದ ಆದರೆ ಅತ್ಯವಶ್ಯವಾದ ಇಂಥ ಪಯಣದ ಮೂರು ಅಗ್ರಮಾನ್ಯ ದಾಖಲೆಗಳು ಇಲ್ಲಿವೆ:

- ಅತ್ಯಂತ ದೀರ್ಘ ತಡೆ ರಹಿತ ಪಯಣದ ವಿಶ್ವ ದಾಖಲೆಯನ್ನು 'ಬಾರ್ ಟೇಲ್ಡ್ ಗಾಡ್ವಿಟ್' (ಚಿತ್ರ1) ಹಕ್ಕಿ ಹೊಂದಿದೆ. ಉದ್ದ ಕಾಲುಗಳ, ಉದ್ದ ಕೊಕ್ಕಿನ, ಸರಾಸರಿ 500 ಗ್ರಾಂನಷ್ಟೇ ತೂಕದ ಈ ಹಕ್ಕಿ ಕಡಲಂಚಿನ ನಿವಾಸಿ. ಉತ್ತರ ಅಮೆರಿಕದ ಉತ್ತರದಂಚಿನ 'ಅಲಾಸ್ಕಾ' ಅದರ ಮೂಲ ನೆಲೆ. ಈ ಹಕ್ಕಿ ಪ್ರತಿ ಚಳಿಗಾಲದಲ್ಲೂ ಅಲಾಸ್ಕಾದಿಂದ ಧರೆಯ ದಕ್ಷಿಣದ ತುದಿಯ 'ನ್ಯೂಜಿಲ್ಯಾಂಡ್'ಗೆ ವಲಸೆ ಬರುತ್ತದೆ. ಬರುವಾಗ 11,000 ಕಿಲೋ ಮೀಟರ್ ಮತ್ತು ಹಿಂದಿರುಗುವಾಗ ಬೇರೊಂದು ಹಾದಿ ಹಿಡಿದು 16,000 ಕಿ.ಮೀ ದೂರ ಪಯಣಿಸುತ್ತದೆ. ಕಲ್ಪನಾತೀತ ಅದ್ಭುತ ಏನೆಂದರೆ ನ್ಯೂಜಿಲ್ಯಾಂಡ್ ಗೆ ಬರುವ ಇಡೀ ಪಯಣವನ್ನು ಈ ಹಕ್ಕಿ ಒಂಬತ್ತು ದಿನಗಳ ಕಾಲ ಹಗಲಿರುಳೆನ್ನದೆ, ಒಮ್ಮೆಯೂ ಎಲ್ಲೂ ನೆಲಕ್ಕಿಳಿಯದೆ, ಆಹಾರ ನೀರು ಸೇವಿಸದೆ ಪೂರ್ಣಗೊಳಿಸುತ್ತದೆ! ಹೀಗೆ ಅತ್ಯಂತ ದೀರ್ಘ ತಡೆರಹಿತ ವಲಸೆ ಪಯಣದ ವಿಶ್ವ ದಾಖಲೆಯನ್ನು ಸ್ಥಾಪಿಸಿದೆ!
- ಅತ್ಯಂತ ದೀರ್ಘ ವಲಸೆ ಪಯಣದ ವಿಶ್ವ ದಾಖಲೆಯನ್ನು ಮತ್ತೊಂದು ಪುಟ್ಟ ಹಕ್ಕಿ 'ಆರ್ಕ್ಟಿಕ್ ಟರ್ನ್' (ಚಿತ್ರ 2) ಸೃಜಿಸಿದೆ. ಗ್ರೀನ್ ಲ್ಯಾಂಡ್‌ನ ತನ್ನ ಮೂಲ ನೆಲೆಯಿಂದ ಪ್ರತಿ ವರ್ಷ 'ಅಂಟಾರ್ಕ್ಟಿಕಾ'ಗೆ ಈ ಹಕ್ಕಿ ವಲಸೆ ಬಂದು ಹಿಂದಿರುಗುತ್ತದೆ. ಈ ಪ್ರತಿ ಪಯಣದ ಹಾದಿಯ ಉದ್ದ 36,000 ಕಿಲೋ ಮೀಟರ್! ಸರಾಸರಿ 100 ಗ್ರಾಂ ತೂಕದ ಆರ್ಕ್ಟಿಕ್ ಟರ್ನ್ ತನ್ನ ಜೀವಿತದ ಸುಮಾರು 30 ವರ್ಷಗಳಲ್ಲಿ ಹೀಗೆ ಕೈಗೊಳ್ಳುವ ಎಲ್ಲ ಪಯಣಗಳ ಒಟ್ಟು ದೂರ ಇಪ್ಪತ್ನಾಲ್ಕು ಲಕ್ಷ ಕಿಲೋ ಮೀಟರ್ ಆಗುತ್ತದೆ!




- ಧರೆಯ ಅತ್ಯಂತ ಪುಟ್ಟ ಗಾತ್ರದ 'ಝೇಂಕಾರದ ಹಕ್ಕಿ'ಯೂ (ಚಿತ್ರ 3) ವಿಸ್ಮಯದ ವಲಸೆ ಯಾನದ ಒಂದು ವಿಶ್ವ ದಾಖಲೆಯನ್ನು ಹೊಂದಿದೆ. ಮಧ್ಯ ಅಮೆರಿಕದಲ್ಲಿರುವ ಎರಡೇ ಗ್ರಾಂ ತೂಕದ, ಹೆಬ್ಬೆರಳ ಗಾತ್ರ ಮೀರದ, ವರ್ಣಮಯ ರೆಕ್ಕೆ ಪುಕ್ಕಗಳ 'ಜೀವಂತ ಆಭರಣ'ದಂಥ ಈ ಹಕ್ಕಿ ಪ್ರತಿ ವರ್ಷ 800 ಕಿಲೋ ಮೀಟರ್ ದೂರದ ವಲಸೆ ಯಾನಗಳನ್ನು ನಡೆಸುತ್ತದೆ. ಪ್ರತಿ ಸೆಕೆಂಡ್ ಗೆ 80 ಬಾರಿ ರೆಕ್ಕೆ ಬಡಿಯುತ್ತ, ತಾಸಿಗೆ 50 ಕಿ.ಮೀ ವೇಗದಲ್ಲಿ ತಡೆ ರಹಿತವಾಗಿ ಪಯಣವನ್ನು ಪೂರ್ಣಗೊಳಿಸುತ್ತದೆ! 'ಅತ್ಯಂತ ಕುಬ್ಜ ಖಗ ವಲಸಿಗ' ಎಂಬ ದಾಖಲೆಯನ್ನು ಸ್ಥಾಪಿಸಿದೆ!

■ ಎನ್. ವಾಸುದೇವ್